ಡಿ.ಡಬ್ಲು಼ 1

ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

ದಿನಾಂಕಃ 04-08-2023.

**ಮುಂದುವರಿದ ಪಾಟೀಸವಾಲುಃ ವಾದಿಗಳ ಪರ ಶ್ರೀ ಕೆ.ಆರ್.ಎನ್ ವಕೀಲರಿಂದ,**

ಸರ್ವೆ ನಂ.680 ಮೂಲತಃ ಒಂದೇ ಸರ್ವೆ ನಂಬರು ಆಗಿತ್ತು. ಅದರ ಒಟ್ಟು ಕ್ಷೇತ್ರ 1 ಎಕರೆ 32 ಗುಂಟೆ ಎಂದರೆ ಸಾಕ್ಷಿ ಸರ್ವೆ ನಂಬರು ಒಂದೇ ಇದ್ದು ಆದರೆ ಅದರ ಒಟ್ಟು ಕ್ಷೇತ್ರ 13 ಎಕರೆ ಚಿಲ್ಲರೆ ಇತ್ತು ಎಂದು ನುಡಿಯುತ್ತಾರೆ. ನನ್ನ ಮಾಹಿತಿಯ ಪ್ರಕಾರ ಸನ್ 2009 ರವರೆಗೆ 13 ಎಕರೆ ಚಿಲ್ಲರೆ ಇತ್ತು. ಸನ್ 2010 ರಲ್ಲಿ ಸರ್ವೆ ನಂ.680 ರಲ್ಲಿ ಒಟ್ಟು 10 ಹಿಸ್ಸೆಗಳಾಗಿರುತ್ತವೆ. ಸರ್ವೆ ನಂ.680 ರಲ್ಲಿ ಭೂ ನ್ಯಾಯ ಮಂಡಳಿಯ ಆದೇಶದಂತೆ ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪ ದುರ್ಗಪ್ಪ ಇವರಿಗೆ 2 ಎಕರೆ 12 ಗುಂಟೆ ಜಂಟಿಯಾಗಿ ಮಂಜೂರಾಗಿತ್ತು. ನಮಗೆ ಮಂಜೂರಾದ ನಂತರ ಸರ್ವೆ ನಂಬರಿನಲ್ಲಿ ಹಿಸ್ಸೆಯಾಗಿರುತ್ತದೆ. ಸರ್ವೆ ನಂ.680 ಕ್ಕೆ ಜಮೀನು ಮಂಜೂರು ಮಾಡಲು ನಾನು ಅರ್ಜಿ ಸಲ್ಲಿಸಿರುವುದಿಲ್ಲ. ನಾನು ಸರ್ವೆ ನಂ.678 ರ ಜಮೀನಿಗೆ ಅರ್ಜಿ ಸಲ್ಲಿಸಿದ್ದೆನು. ಸರ್ವೆ ನಂ.680 ನನ್ನ ತಂದೆಗೆ ಮತ್ತು ನನ್ನ ಚಿಕ್ಕಪ್ಪ ದುರ್ಗಪ್ಪನಿಗೆ ಸಮಯಕ್ ನಾತೆಯಿಂದ ಮಂಜೂರು ಮಾಡಲಾಗಿರುತ್ತದೆ. ಸರ್ವೆ ನಂ.680 ಕ್ಕೆ ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪ ಮಂಜೂರಾತಿಗಾಗಿ ಸ್ವತಂತ್ರವಾಗಿ ಅರ್ಜಿ ಸಲ್ಲಿಸಿದ ಬಗ್ಗೆ ನನ್ನ ಬಳಿ ಯಾವುದೇ ದಾಖಲೆ ಇರುವುದಿಲ್ಲ. ನನ್ನ ತಂದೆ ಮತ್ತು ದುರ್ಗಪ್ಪ ಸ್ವತಂತ್ರ ನಾತೆಯಿಂದ ಅರ್ಜಿ ಸಲ್ಲಿಸಿದ್ದಾರೆಂದು ನನಗೆ ಟ್ರಿಬ್ಯುನಲ್ ನಿಂದ ನೋಟಿಸ್ ಬಂದ ನಂತರ ಗೊತ್ತಾಗಿರುತ್ತದೆ. ಟ್ರಿಬ್ಯುನಲ್ ನಿಂದ ನೋಟಿಸ್ ನನ್ನ ತಂದೆಗೆ ಬಂದಿತ್ತು, ಅದು ಯಾವ ವರ್ಷ ಯಾವ ದಿನಾಂಕ ಮತ್ತು ತಿಂಗಳು ನನಗೆ ನೆನಪಿಲ್ಲ. ಈಗ ತೋರಿಸುತ್ತಿರುವ ದಾಖಲೆಯಲ್ಲಿ ನಾನು 3 ನೇ ಅರ್ಜಿದಾರ ಎಂದು ಬರೆಯಲಾಗಿದೆ ಎಂದರೆ ಸರಿ. ಅದು ಭೂ ನ್ಯಾಯ ಮಂಡಳಿಯ ಆದೇಶದ ಪ್ರತಿ ಎಂದರೆ ಸರಿ. ಸದರಿ ದಾಖಲೆಯನ್ನು ಸಾಕ್ಷಿ ಒಪ್ಪಿರುವುದರಿಂದ ಅದನ್ನು ನಿ.ಪಿ-89 ಎಂದು ಗುರುತಿಸಲಾಯಿತು. ನಾನು ಸರ್ವೆ ನಂ.680 ನಲ್ಲಿ ಭೂಮಿ ಮಂಜೂರಾತಿ ಮಾಡಲು ಅರ್ಜಿ ಸಲ್ಲಿಸಿದ್ದಕ್ಕೆ ಭೂ ನ್ಯಾಯ ಮಂಡಳಿಯು ನನ್ನ ತಂದೆಗೆ ಮಂಜೂರು ಮಾಡಿರುವುದರಿಂದ ನಿಪಿ-89 ರಲ್ಲಿ ಹೇಳಿದಂತೆ ನನ್ನ ಅರ್ಜಿಯನ್ನು ವಜಾ ಮಾಡಲಾಗಿದೆ ಎಂದರೆ ಸರಿ. ನಿ.ಡಿ-1 ರಿಂದ 3 ರಲ್ಲಿ ಸರ್ವೆ ನಂ.680 ರ ಆಸ್ತಿಯು ಸಂರಕ್ಷಿತ ರೈತ ಹಕ್ಕಿನ ಪ್ರಕಾರ ನನ್ನ ತಂದೆಗೆ ಮತ್ತು ಚಿಕ್ಕಪ್ಪನಿಗೆ ಮಂಜೂರಾಗಿದೆ ಎಂದು ಬರೆಯಲಾಗಿದೆ ಎಂದರೆ ಸರಿ. ಸದರಿ ನಿ.ಡಿ-1 ರಲ್ಲಿ ಸಂರಕ್ಷಿತ ರೈತ ನಾತೆ ಹಕ್ಕು ಎಂದು ಬರೆಯಲಾಗಿದೆ ಎಂದರೆ ಸರಿ. ಸದರಿ ಸರ್ವೆ ನಂ.680 ರ ಆಸ್ತಿಯು ನನ್ನ ತಂದೆಗೆ ಸ್ವತಂತ್ರವಾಗಿ ಮಂಜೂರಾತಿ ಆಗಿದೆ ಎಂದು ತೋರಿಸಲು ಬಾಯಿಮಾತಿನ ಸಾಕ್ಷಿ ಬಿಟ್ಟು ಬೇರೆ ಯಾವುದೇ ದಾಖಲೆ ನನ್ನ ಬಳಿ ಇಲ್ಲ ಎಂದರೆ ಸರಿ. ನಮ್ಮ ಕುಟುಂಬದ ಎಲ್ಲಾ ಆಸ್ತಿಗಳಿಗಿಂತ ಸರ್ವೆ ನಂ.680 ಆಸ್ತಿಯು ಬಹಳ ಬೆಲೆ ಬಾಳುವ ಆಸ್ತಿ ಎಂದರೆ ಸರಿ. 2 ನೇ ಪ್ರತಿವಾದಿ ನನ್ನ ಮಗ ಎಂದರೆ ಸರಿ. ನನ್ನ ತಂದೆ 2 ನೇ ಪ್ರತಿವಾದಿಗೆ ದಾನ ಪತ್ರ ಮಾಡಿದಕ್ಕೆ ನಾನು ಸಹಿ ಮಾಡಿರುವುದಿಲ್ಲ. 2 ನೇ

ಪ್ರತಿವಾದಿಗೆ 36 ಗುಂಟೆ ಆಸ್ತಿಯನ್ನು ದಾನಪತ್ರ ಮಾಡಲಾಗಿದೆ. 1 ನೇ ವಾದಿಗೆ 10 ಗುಂಟೆಯನ್ನು ಕೊಟ್ಟ ಬಗ್ಗೆ ನಮ್ಮ ತಂದೆಯವರು ಯಾವುದೇ ದಾಖಲೆ ಮಾಡಿರುವುದಿಲ್ಲ. 2 ನೇ ಪ್ರತಿವಾದಿ ನನ್ನ ಮಗ ದಾನ ಪತ್ರದ ಮೂಲಕ ಬಂದ ಆಸ್ತಿಯಲ್ಲಿ 6 ಗುಂಟೆಯನ್ನು ಮಾರಾಟ ಮಾಡಿದ್ದಾರೆ, ಆದರೆ ಯಾರಿಗೆ ಮಾರಾಟ ಮಾಡಿದ್ದರು ಎಂದು ನನಗೆ ಅವರ ಹೆಸರು ಗೊತ್ತಿಲ್ಲ. 2 ನೇ ಪ್ರತಿವಾದಿ ಮಾಡಿಕೊಟ್ಟ ಕ್ರಯ ಪತ್ರಕ್ಕೆ ನಾನು ಸಹಿ ಮಾಡಿರುವುದಿಲ್ಲ. ಈಗ ತೋರಿಸುತ್ತಿರುವ ದಾಖಲೆಯಲ್ಲಿ ಸಾಕ್ಷಿ ಎಂದು ಹೇಳಿ ನನ್ನ ಹೆಸರು ಬರೆಯಲಾಗಿದೆ. ಅದು 2 ನೇ ಪ್ರತಿವಾದಿಯು 11 ನೇ ಪ್ರತಿವಾದಿಗೆ ಮಾಡಿಕೊಟ್ಟ ಕ್ರಯ ದಸ್ತಾವೇಜು ಆಗಿದ್ದು ಅದನ್ನು ನಿಪಿ-90 ಎಂದು ಗುರುತಿಸಲಾಯಿತು. ಈಗ ತೋರಿಸುತ್ತಿರುವ ನಿಪಿ-1 ದಾನಪತ್ರದ ಮೂಲ ಪ್ರತಿ 2 ನೇ ಪ್ರತಿವಾದಿ ಬ್ಯಾಂಕಿನಲ್ಲಿ ಇಟ್ಟಿರುತ್ತಾರೆ. ನಿಪಿ-1 ರಲ್ಲಿ ಅವಿಭಕ್ತ ಕುಟುಂಬದ ಆಸ್ತಿಯೆಂದು ಬರೆಯಲಾಗಿದೆ. ಆ ಕಾರಣಕ್ಕಾಗಿ ಅದರ ಮೂಲ ಪ್ರತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. 12 ನೇ ಪ್ರತಿವಾದಿಗೆ ಮಾಡಿಕೊಟ್ಟ ಕ್ರಯ ಪತ್ರದ ಮೂಲ ಪ್ರತಿಯನ್ನು ಹಾಜರುಪಡಿಸಿದರೆ ಸತ್ಯಾಂಶ ಗೊತ್ತಾಗುತ್ತದೆ ಎಂದು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಖರೀದಿ ಕೊಟ್ಟಾಗ ಪ್ರತಿ ಗುಂಟೆಗೆ ಎಷ್ಟು ಬೆಲೆ ಇತ್ತು ಎಂದರೆ 50 ರಿಂದ 60 ಸಾವಿರ ಬೆಲೆ ಇತ್ತು. ಸರ್ವೆ ನಂ.680 ರಲ್ಲಿ ನನ್ನ ತಂದೆಯವರು 1 ನೇ ವಾದಿಗೆ 10 ಗುಂಟೆ ಆಸ್ತಿಯನ್ನು ಕೊಟ್ಟಿದ್ದಾರೆ ಎಂದು ನನ್ನ ಪ್ರತಿವಾದ ಪತ್ರದಲ್ಲಿ ವಕೀಲರಿಗೆ ಹೇಳಿ ಬರೆಸಿರುವುದಿಲ್ಲ. ಸರ್ವೆ ನಂ.680 ಬಹಳ ಬೆಲೆಬಾಳುವ ಆಸ್ತಿಯಾಗಿದ್ದು ವಾದಿಗಳಿಗೆ ಮೋಸ ಮಾಡುವ ಉದ್ದೇಶದಿಂದ ನಾನು ಮತ್ತು ಉಳಿದ ಪ್ರತಿವಾದಿಗಳು ಸೇರಿಕೊಂಡು ದಾನ ಪತ್ರ ಮತ್ತು ಕ್ರಯ ಪತ್ರ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ದಾನ ಪತ್ರ ಮತ್ತು ಕ್ರಯ ಪತ್ರ ಮಾಡುವಾಗ 1 ನೇ ವಾದಿಯು ಅಪ್ರಾಪ್ತ ವಯಸ್ಕನಾಗಿದ್ದು 1 ನೇ ವಾದಿ ಮತ್ತು ಆತನ ತಾಯಿಯ ಗಮನಕ್ಕೆ ತಾರದೇ ಮೋಸದಿಂದ ದಾನಪತ್ರ ಮತ್ತು ಕ್ರಯ ಪತ್ರ ಮಾಡಲಾಗಿದೆ ಎಂದರೆ ಸರಿಯಲ್ಲ. ದಾನ ಪತ್ರಕ್ಕೆ ಮತ್ತು ಕ್ರಯಪತ್ರಕ್ಕೆ ವಾದಿಯರ ಮತ್ತು ಸಹೋದರ ಮತ್ತು ಸಹೋದರರ ಮಕ್ಕಳ ಸಹಿ ಪಡೆದುಕೊಂಡಿರುವುದಿಲ್ಲ, ಏಕೆಂದರೆ ಅದರ ಅವಶ್ಯಕತೆ ಇರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ನನ್ನ ಬಳಿ ಇರುವುದರಿಂದ ನನ್ನ ಮಾತು ಕೇಳುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆಗೆ ಆಗ ಸ್ವತಂತ್ರವಾಗಿ ನಡೆಯಲು ಮತ್ತು ತೀರ್ಮಾನ ತೆಗೆದುಕೊಳ್ಳಲು ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾವು ಮತ್ತು ಉಳಿದ ಪ್ರತಿವಾದಿಯವರು ಮಾಡಿದ ಕ್ರಯ ದಸ್ತಾವೇಜುಗಳು ಅಸಿಂಧು ಇರುತ್ತವೆ ಎಂದರೆ ಸರಿಯಲ್ಲ. ದಾನ ಪತ್ರ ಮತ್ತು ಕ್ರಯ ಪತ್ರ ಒಂದೇ ದಿನ ಮಾಡಲಾಗಿದೆ ಎಂದರೆ ಸರಿ. ದಾನ ಪತ್ರ ಮತ್ತು ಕ್ರಯ ಪತ್ರ ಮಾಡುವಾಗ ನಾನು ಹೋಗಿರಲಿಲ್ಲ ಆದರೆ 2 ನೇ ಪ್ರತಿವಾದಿ ಮತ್ತು ನನ್ನ ತಂದೆ, ಮತ್ತು ನನ್ನ ಚಿಕ್ಕಪ್ಪನ ಮಕ್ಕಳು ಹೋಗಿದ್ದರು.

ನಿಪಿ-90 ನ್ನು ಮಾಡುವಾಗ ನಾನು ಹೋಗಿರುವುದಿಲ್ಲ. ನಿಪಿ-90 ರಲ್ಲಿ ಸಾಕ್ಷಿಯಾಗಿ ನನ್ನ ಹೆಸರು ಬರೆಯಲಾಗಿದೆ, ಆದರೆ ಅದರ ಮೇಲಿರು ಸಹಿ ನನ್ನದು ಇರುವುದಿಲ್ಲ, ಅದನ್ನು ಯಾರು ಮಾಡಿದರು ಎಂದು ನನಗೆ ಗೊತ್ತಿಲ್ಲ. 11 ನೇ ಪ್ರತಿವಾದಿ ತನಗೆ ಪ್ರತ್ಯೇಕ ವಕೀಲರನ್ನು ನೇಮಿಸಿಕೊಂಡಿರುತ್ತಾರೆ. ನಿಪಿ-90 ರಲ್ಲಿ ಸಾಕ್ಷಿಯಾಗಿ ನಾನೇ ಸಹಿ ಮಾಡಿದ್ದೇನೆ, ಆದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ.680 ಒಟ್ಟು ಮೂಲತಃ ಎಷ್ಟು ವಿಸ್ತೀರ್ಣ ಇತ್ತು

ಎಂದು ನನ್ನ ಪ್ರತಿವಾದ ಪತ್ರದಲ್ಲಿ ಹೇಳಿ ಬರೆಸಿರುವುದಿಲ್ಲ. ನಾನು ಮತ್ತು 2 ನೇ ಪ್ರತಿವಾದಿ ವಾದಿಯರಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ದಾಖಲೆ ಸೃಷ್ಠಿ ಮಾಡಿದ್ದೇವೆ ಎಂದರೆ ಸರಿಯಲ್ಲ. ದಾವಾಸ್ತಿ ಒಟ್ಟು ಕುಟುಂಬದ ಆಸ್ತಿಯಿದ್ದು, 1 ನೇ ವಾದಿ ಅಪ್ರಾಪ್ತ ವಯಸ್ಕನಾಗಿದ್ದರೂ ಸಹ ಕಾನೂನು ಬಾಹಿರವಾಗಿ ದಾನ ಪತ್ರ ಮಾಡಿದ್ದೇವೆ ಎಂದರೆ ಸರಿಯಲ್ಲ. ವಾದಿಯರ ಬೆನ್ನ ಹಿಂದೆ ದಾಖಲೆಗಳನ್ನು ಸೃಷ್ಠಿ ಮಾಡಿ ಅವರಿಗೆ ಮೋಸ ಮಾಡುವ ಉದ್ದೇಶದಿಂದ ಆಸ್ತಿಯನ್ನು ವರ್ಗಾವಣೆ ಮಾಡಿದ್ದೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

ಸಹಿ ಇದೆ.

**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**